ಮೈಸೂರ ಗೆಜೆಟ್.

ನಂ. 42.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 16.

ಬೆಂಗಳೂರು, ಗುರುವಾರ, ಏಪ್ರಿಲ್ ತಾ॥ 18, ಸ॥ 1907.

II-ನೆ ಭಾಗ.

ಇಂಡ್ಯಗವ್ವರ್ಮೆಂಟ್, ರೆಸಿಡೆಂಟರು, ಜೀಲ್ಲಾ ಜಡ್ಜ್ಜೀರು ಮಗೈರೇರಿಂದ ಕೊಡೋಣಾದ ಇಸ್ತಿಹಾರಿನಾಮೆಗಳು.

ಫಾರೆಸ್ಟ್ ಇಲಾಖಾ.

ಪ್ರಕಟನೆ.

ಶಿವಮೊಗ್ಗ ಡಿಸ್ಟ್ರಿಕ್ಟ್ ಶಿವಮೊಗ್ಗಾ ತಾಲ್ಲೂಕು ಕಾಕನಹೊಸೂರಿ ಜಂಗಲಿಯನ್ನು ಮನ್ನಾ ಜಂಗಲಿ ಮಾಡುವ ವಿಷಯದಲ್ಲಿ ಈ ಆಫೀಸಿನಿಂದ ಫಾರೆಸ್ಟ್ ರೆಗ್ಯುಲೇಷ್ 5ನೆ ಪ್ರಕರಣವನ್ನನುಸರಿಸಿ ಕೊಡಲ್ಪಟ್ಟ ಮಾರ್ಚಿ 20ನೆ ತಾರೀಖಿನ ಇಸ್ತಿಹಾರ್ 1907ನೆ ಇಸವಿ ಏಪ್ರಿಲ್ 4ನೆ ತಾರೀಖಿನ ಮೈಸೂರ ಗೆಜೆಟಿನ 2ನೆ ಭಾಗದ 93, 94, 95ನೆ ಪೇಜಿನಲ್ಲಿ ತಪ್ಸೀಲಾಗಿ ವಿವರಿಸಲ್ಪಟ್ಟಿರುತ್ತೆ.

ಕಡೂರು ಡಿಸ್ಟ್ರಿಕ್ಟು ಮೂಡಗೆರೆ ತಾಲ್ಲೂಕಿನಲ್ಲಿರುವ ದಕ್ಷಿಣ ಭದ್ರಾ ಜಂಗಲಿಯನ್ನು ಮನ್ನಾ ಜಂಗಲಾಗಿ ಮಾಡತಕ್ಕ ವಿಷಯದಲ್ಲಿ ಈ ಆಫೀಸಿನಿಂದ ಫಾರೆಸ್ಟ್ ರೆಗ್ಯುಲೇಷ್ 5ನೆ ಪ್ರಕರಣವನ್ನನುಸರಿಸಿ ಕೊಡಲ್ಪಟ್ಟ ಮಾರ್ಚಿ 28ನೆ ತಾರೀಖಿನ ಇಸ್ತಿಹಾರ್ 1907ನೆ ಇಸವಿ ಏಪ್ರಿಲ್ 4ನೆ ತಾರೀಖಿನ ಮೈಸೂರ ಗೆಜೆಟಿನ ಕನ್ನಡ 2ನೆ ಭಾಗದ 9[illegible], 97, 98ನೆ ಪೇಜಿನಲ್ಲಿ ತಪ್ಸೀಲಾಗಿ ವಿವರಿಸಲ್ಪಟ್ಟಿರುತ್ತೆ.

ಎಂ. ರಾಮರಾವ್,
ಮೈಸೂರು ಸೀಮೆಯ ಫಾರೆಸ್ಟ್ ಸೆಟ್ಲ್‌ಮೆಂಟ್ ಆಫಿಸರ್.

ಇಸ್ತಿಹಾರ್ನಾಮೂ, ತಾರೀಖು 11ನೆ ಏಪ್ರೆಲ್ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಈ ಕೆಳಗೆ ಕಂಡ ಡಿಪೋಗಳಲ್ಲಿ ಚಾಬೀನಾವನ್ನು ಸದರಿ ಡಿಪೋಗಳ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಬಹಿರಂಗವಾಗಿ ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

ನಂ.	ಡಿಪೋಗಳ ಹೆಸರು.	ಹರಾಜು ತಾರೀಖು.	ನಾಟಾಗಳ ವಿವರ.	ಸಲೆ ಅಡಿ. ನಂಬರ್.	ಸಲೆ ಅಡಿ. ಅಡಿ.	ಷರಾ.
1	ಮೈಸೂರು ಉಡಿಯಾರ್ಡ್	13—5—07	ಸಾಗ್ವಾನಿ ನಾಟಾ ..	550	16,000	ಹೆಚ್ಚಿನ ಕಡಿಮೆ ಗ್ಯಾರಂಟಿ ಮೇಲೆ
			ಡಿಟೋ ತುಂಡು ...	600	6,000	
			ಹೊನ್ನೆ ನಾಟಾ ...	70	2,000	
			ಡಿಟೋ ತುಂಡುಗಳು ...	45	500	
			ಮತ್ತಿ ನಾಟಾ ...	90	2,000	
			ಡಿಟೋ ತುಂಡುಗಳು	40	500	
2	ನಂಜನಗೂಡು ಡಿಪೋ.	14—5—07	ಸಾಗ್ವಾನಿನಾಟಾ ...	80	2,000	
			ಡಿಟೋ ತುಂಡುಗಳು ...	50	500	
			ಹೊನ್ನೆ ನಾಟಾ ...	60	2,000	
			ಡಿಟೋ ತುಂಡುಗಳು ...	60	500	
			ಮತ್ತಿ ನಾಟಾ	10	300	
			ಡಿಟೋ ತುಂಡುಗಳು ...	25	500	

ಹರಾಜು ಷರತ್ತು :—1895ನೆ ಇಸವಿ ಏಪ್ರೆಲ್ ತಾರೀಖು 25ನೆ ಮತ್ತು೦ 15ನೆ ನಂಬರು ಮೈಸೂರು ಗೆಜೆಟ್ಟಿನಲ್ಲಿ ಫಾಯಿಷ್ ಆಗಿರುವ 1895ನೆ ಇಸವಿ ಮಾರ್ಚಿ 15ನೆ ಮತ್ತು೦ ನಂಬರ್ 15229—R. F. 155—92ನೆ ನೋಟಿಫಿಕೇಷನ್ ನೋಡಬೇಕು.

ಎಂ. ಜಿ. ರಾಮರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 9ನೆ ಏಪ್ರೆಲ್ 1907.

1. ಕಂದಾಯದ ಬಾಕೀದಾರರಾದ ಜೋಡಿ ಹುಲ್ಲುಕೆರೆ ಗ್ರಾಮದ ಸೂರಪ್ಪನವರು, ಇಂದಘಟ್ಟದ ರಾಮಣ್ಣನವರಿಂದ ಬರ ಬೇಕಾದ ಜವಿರ್ಜ್ ಕಂದಾಯದ ಬಾಕಿಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಮೈಸೂರು ಡಿಸ್ಟ್ರಿಕ್ಟ್ ನಾಗಮಂಗಲ ತಾಲ್ಲೂಕು ಜೋಡಿ ಹುಲ್ಲುಕೆರೆ ಗ್ರಾಮದಲ್ಲಿ 28—5—07ನೆ ತಾರೀಖಿನಲ್ಲಿ ಬಹಿರಂಗವಾಗಿ ಹರಾಜು ಡಿವಿಜ್ ಆಫಿಸರವರು ಮಾಡುತ್ತಾರೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹರಾಜು ತಾಲ್ಲೂಕು ಕಚೇರಿಯಲ್ಲಿ ದಿನ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ವಿಕದಂ ಚಡ ದರಖಾಸ್ತುದಾರನ ಹಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರಿ ಸ್ವತ್ತಿಗಾಗಿ ಹರಾಜುದಾರನು 1906ನೆ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ವೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತ್ಯಾಲ್ ವೇರ್‌ಗೆ 142—6—3 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜು ವೊಬಲಗಿನ ಕೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕಿ ವೊಬಲಗು ಹರಾಜು ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡಬೇಕೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ವೊಬಲಗನ್ನು ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ವೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ವೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದಾಗತಕ್ಕ, ಸ್ವಂತಕ್ಕೊತ್ತರ ಸವಾಲ್ ಮಾಡುತ್ತಾರೆಯೇ ಯಾ ಏಜಂಟು ಯಾ ಮುಕ್ತ್ಯಾರೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕಂತಲೂ, ಇತರರಿಗೋಸ್ಕರ ಮುಕ್ತ್ಯಾರೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡಬೇಕೆಂತೆಯೂ ಕೇಳಿಸಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಅತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡತಕ್ಕದ್ದು.

7. ಹರಾಜು ಡೆಪ್ಯೂಟಿ ಕವಿನಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.